

# ಕಲ್ಲಿನ ಕಾಡು!

ಮಡಗಾಸ್ಕರ್‌ನ ಪಶ್ಚಿಮ ಕರಾವಳಿಗೆ ಹತ್ತಿರದಲ್ಲಿ 666 ಚದರ ಕಿಲೋಮೀಟರ್ ನಷ್ಟು ‘ಸಿಂಗ್ಗಿ ಡಿ ಬೆಮರಾಹಾ ಸ್ಟ್ರಿಕ್ಟ್ ನೇಚರ್ ರಿಸರ್ವ್’ ಇದೆ. ಅತ್ಯಂತ ವಿಶಿಷ್ಟವಾದ ಭೌಗೋಳಿಕತೆ, ಸಂರಕ್ಷಿತ ಮ್ಯಾಂಗ್ರೋವ್ ಅರಣ್ಯಗಳು, ಕಾಡು ಪಕ್ಷಿ ಮತ್ತು ಲೆಮ್ಯೂರ್‌ಗಳ ಸಂತತಿಯ ಕಾರಣದಿಂದಾಗಿ ಈ ಪ್ರದೇಶವನ್ನು 1990ರಲ್ಲಿ ವಿಶ್ವ ಪರಂಪರೆಯ ತಾಣವೆಂದು ಗುರ್ತಿಸಲಾಗಿದೆ.

ಸಿಂಗ್ಗಿಯು ನೆಲದಿಂದ 70 ಮೀಟರ್ ಎತ್ತರಕ್ಕೆ ಇದ್ದು ನಗ್ನವಾಗಿರುವ ಇದರ ಮೇಲ್ಭಾಗವು ರೇಜರ್‌ನಂತೆ ಹರಿತವಾಗಿದೆ. ಮಡಗಾಸ್ಕರ್‌ನ ಸ್ಥಳೀಯ ಮಲಗಾಸಿ ಭಾಷೆಯಲ್ಲಿ ‘ಸಿಂಗ್ಗಿ’ ಎಂದರೆ ‘ಒಬ್ಬರು ಬರಿಗಾಲಿನಲ್ಲಿ ನಡೆಯಲು ಸಾಧ್ಯವಾಗದು’ ಎಂಬ ಅರ್ಥ ಬರುತ್ತದೆ. ಈ ಪದವು ಅಸಾಧಾರಣವಾದ ಸ್ಥಳ ಸ್ವರೂಪ (ಟೊಪೋಗ್ರಫಿ)ವನ್ನು ಸೂಕ್ತವಾಗಿ ವಿವರಿಸುತ್ತದೆ.

ಸವಕಳಿಯಾದ ಸುಣ್ಣದ ಈ ಟೊಪೋಗ್ರಫಿ ಪ್ರಪಂಚದ ಇತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರಬಹುದು. ಆದರೆ ಇಲ್ಲಿರುವ ಶೃಂಗಗಳಂತೆ ತೆಳ್ಳಗೆ, ಎತ್ತರ ಮತ್ತು ವಿಸ್ತಾರವಾಗಿ ಎಲ್ಲಿಯೂ ಇಲ್ಲ. ಸಹಜವಾಗಿ ಕಾಣುವ ಅರಣ್ಯ ಕಣಿವೆಗಳು, ತೇವವುಳ್ಳ ಗುಹೆಗಳು, ನೆಲದಡಿ ಕಲ್ಲು ಕರಗಿ ಉಂಟಾದ ಕಾಲುವೆಗಳಿರುವ ವಿಸ್ಮಯದ ಈ ಕೆಳ ಜಗತ್ತಿನಲ್ಲಿ ಮೂಲಭೂತವಾಗಿ ವಿಭಿನ್ನ ಬಗೆಯ ಸಸ್ಯಗಳು ಮತ್ತು ಪ್ರಾಣಿಗಳು ಕಂಡು ವಾಸಿಸುತ್ತವೆ.

■ **ವಿನಯ್‌ಕುಮಾರ್ ಬಿ.ಹೆಚ್.**

